ಆಸಕ್ತಿ. ಕ್ರಿಕೆಟ್ ಆಡುತ್ತಾನೆ, ನೋಡುತ್ತಾನೆ. ಆದರೆ ಆ ಕ್ರೀಡೆಯ ಬಗ್ಗೆ ಎಂದೂ ಆಸಕ್ತಿ ವ್ಯಕ್ತಪಡಿಸಿಲ್ಲ. ಕ್ರೀಡಾಸಾಧಕರ ಕುರಿತ ಪುಸ್ತಕಗಳನ್ನು ಓದುವುದು ಅವನಿಗೆ ಬಹಳಷ್ಟು ಖುಷಿಕೊಡುತ್ತದೆ. ಚೆಸ್ ಜೊತೆಗೆ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್ ಆಡುತ್ತಾನೆ. ಕುಟುಂಬದವರು ಹಾಗೂ ಸ್ನೇಹಿತರ ಜೊತೆ ಪ್ರವಾಸ ಮಾಡುತ್ತಾನೆ. ಎಲ್ಲಿಯೇ ಹೋದರೂ ಅಂತಿಮವಾಗಿ ಆತನಿಗೆ ಸಂತೃಪ್ತಿ ನೀಡುವುದು ಚೆಸ್ ಬೋರ್ಡ್ ಮಾತ್ರ' ಎಂದಿದ್ದರು.

## ಪ್ರವರ್ಧಮಾನದಲ್ಲಿ ಚೆಸ್

ಭಾರತದಲ್ಲಿ ಕ್ರಿಕೆಟ್‌ಗೆ ವ್ಯಾಪಕ ಪ್ರಚಾರ ಹಾಗೂ ಮಾನ್ಯತೆ ಸಿಗುತ್ತಿರುವ ನಡುವೆಯೂ ಚೆಸ್ ಕೂಡ ದೊಡ್ಡ ಸದ್ದಿನೊಂದಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುತ್ತಿದೆ. ಹೊಸ ಪ್ರತಿಭೆಗಳ ಹರಿವು ವೇಗವಾಗಿದೆ. ಅದಕ್ಕೆ ದೇಶದಲ್ಲಿನ ಚೆಸ್ ಚಟುವಟಿಕೆಗಳು ಪೂರಕವಾಗಿವೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ವಿಶೇಷವಾಗಿ ಯುವ ತಲೆಮಾರಿನ ಆಟಗಾರರು ಕಾಯಿಗಳನ್ನು ಮುನ್ನಡೆಸುವಲ್ಲಿ ತೋರಿಸುತ್ತಿರುವ ಚಾಣಾಕ್ಷತನ, ತತ್‌ಕ್ಷಣ ನಿರ್ಧಾರ ಕೈಗೊಳ್ಳುವ ಬುದ್ಧಿವಂತಿಕೆ ಮತ್ತು ಆಟಕ್ಕೆ ಅಗತ್ಯವಾದ ತಾಳ್ಮೆ ಈಗಿನ ಆಟಗಾರರಲ್ಲಿ ಕಂಡುಬರುತ್ತಿದೆ.

ದೇಶದಲ್ಲಿ ಮಹತ್ವದ ಟೂರ್ನಿಗಳ ಆಯೋಜನೆಯೂ ಈ ಕ್ರೀಡೆಯ ಬೆಳವಣಿಗೆಗೆ ಪ್ರಮುಖ ಕಾರಣವಾಗುತ್ತಿದೆ. 2022ರಲ್ಲಿ ಚೆನ್ನೈ ಸಮೀಪದ ಮಹಾಬಲಿಪುರಂನಲ್ಲಿ ಪ್ರತಿಷ್ಠಿತ ಅತಿ ದೊಡ್ಡ ಚೆಸ್ ಹಬ್ಬ 'ವಿಶ್ವ ಚೆಸ್ ಒಲಿಂಪಿಯಾಡ್' ನಡೆದಿತ್ತು. 1927ರಲ್ಲಿ ಅಧಿಕೃತವಾಗಿ ಆರಂಭವಾದ ಈ ಟೂರ್ನಿಯನ್ನು ಮೊದಲ ಬಾರಿಗೆ ಭಾರತದಲ್ಲಿ ಆಯೋಜಿಸಲಾಗಿತ್ತು. ತಮಿಳುನಾಡಿನಲ್ಲಿ ಆರಂಭವಾದ ಹಲವು ಚೆಸ್ ಅಕಾಡೆಮಿಗಳು ಮತ್ತು ವಿಶೇಷವಾಗಿ ವೆಸ್ಟ್‌ಬ್ರಿಡ್ಜ್ ಆನಂದ್ ಚೆಸ್ ಅಕಾಡೆಮಿ ದೇಶದಲ್ಲಿ ಚೆಸ್ ಹೊಸ ಅಲೆಗೆ ಕಾರಣವಾಯಿತು. ಇದರಿಂದ ಹೊಸ ಪ್ರತಿಭೆಗಳ ಶೋಧವೂ ಆಯಿತು.



ಮ್ಯಾಗ್ನಸ್ ಕಾರ್ಲ್‌ಸನ್ ಎದುರಿನ ಪಂದ್ಯದಲ್ಲಿ ಗುಕೇಶ್

ಈಗಿನ ಹಾಗೂ ಮುಂಬರುವ ತಲೆಮಾರಿನ ಮಕ್ಕಳಿಗೆ ವಿಶ್ವನಾಥನ್ ಆನಂದ್ ಮಾದರಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಯುವ ತಲೆಮಾರಿನ ಪ್ರತಿಭೆಗಳಿಗೆ ಅವರು ಆಯೋಜಿಸುತ್ತಿರುವ ತರಗತಿಗಳು, ಕೌಶಲ ಕಲಿಕೆ, ಮಾರ್ಗದರ್ಶನ, ವಿಚಾರ ಸಂಕಿರಣ ಮತ್ತು ಹೊಸ ಅವಕಾಶಗಳ ಸೃಷ್ಟಿ ಚೆಸ್ ಬೆಳವಣಿಗೆಗೆ ಪೂರಕವಾಗುತ್ತಿವೆ.

ಭಾರತದಲ್ಲಿ ಚೆಸ್ ಕ್ರಾಂತಿಗೆ ಆನಂದ್ ಮುನ್ನುಡಿ ಬರೆದರು. ಇವರ ನಂತರದ ವರ್ಷಗಳಲ್ಲಿ ಕೃಷ್ಣನ್ ಶಶಿಕಿರಣ್, ಪಿ. ಹರಿಕೃಷ್ಣ, ಕೊನೇರು ಹಂಪಿ, ದ್ರೋಣವಲ್ಲಿ ಹರಿಕಾ, ವೈಶಾಲಿ ರಮೇಶಬಾಬು, ಭಕ್ತಿ ಕುಲಕರ್ಣಿ ಸೇರಿದಂತೆ ಅನೇಕರು ಜಾಗತಿಕ ಮಟ್ಟದಲ್ಲಿ ಭಾರತೀಯ ಚೆಸ್‌ಪ್ರಿಯರು ಕಣ್ಣರಳಿಸಿ ನೋಡುವಂತೆ ಮಾಡಿದ್ದಾರೆ.

ದೇಶದ ಮೊದಲ ರಾಷ್ಟ್ರೀಯ ಚೆಸ್ ಚಾಂಪಿಯನ್ ರಾಮಚಂದ್ರ ಸಾಪ್ರೆ, ಮೊದಲ ಇಂಟರ್‌ನ್ಯಾಷನಲ್ ಮಾಸ್ಟರ್ ಎಂ. ಆ್ಯರನ್ (Manuel Aaron) ಮತ್ತು ಮೊದಲ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಎಸ್. ವಿಜಯಲಕ್ಷ್ಮಿಯಿಂದ ಹಿಡಿದು ಈಚೆಗಿನ ಪ್ರತಿಭೆಗಳಾದ ವಿಶ್ವದ ಮೂರನೇ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ ಗುಕೇಶ್, ಚೆನ್ನೈನ ಪ್ರಜ್ಞಾನಂದ, ರೌನಕ್ ಸಾಧ್ವಾನಿ, ನಿಹಾಲ್ ಸರೀನ್, ಅರ್ಜುನ್ ಎರಿಗೈಸಿ ಹೀಗೆ ಅನೇಕ ಯುವ ಪ್ರತಿಭೆಗಳು ಹರಿಯುವ ಚೆಸ್ ಸಾಮ್ರಾಜ್ಯದ ನದಿಗೆ ಹೊಸ ತೊರೆಗಳಾಗಿ ಸೇರುತ್ತಲೇ ಇವೆ.

ಪ್ರತಿಕ್ರಿಯಿಸಿ: feedback@sudha.co.in

